**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

**ಸಂಖ್ಯೆ:**ಕಾಶಿಇ/ಪ್ರಾಕಬೆಂ/ಆಂ-1/06/ಖಾಹುಭ/2019-20

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ
ಬೆಂಗಳೂರು-9, ದಿನಾಂಕ:23.03.2023

**ಇವರಿಗೆ:**

ಅಧ್ಯಕ್ಷರು/ಕಾರ್ಯದರ್ಶಿಗಳು
ಶ್ರೀ ಲೋಕಸೇವಾ ನಿರತ ಡಿ ಕೊಂಗಾಡಿಯಪ್ಪ ಸ್ಮಾರಕ ಸಂಸ್ಥೆ
ದೊಡ್ಡಬಳ್ಳಾಪುರ.
**ಬೆಂಗಳೂರು ಗ್ರಾಮಾಂತರ ಜಿಲ್ಲೆ-561203**

ಮಾನ್ಯರೆ,

ವಿಷಯ: ಶ್ರೀ ಲೋಕಸೇವಾ ನಿರತ ಡಿ ಕೊಂಗಾಡಿಯಪ್ಪ ಸ್ಮಾರಕ ಸಂಸ್ಥೆ ದೊಡ್ಡಬಳ್ಳಾಪುರ ಇದರ ವ್ಯಾಪ್ತಿಯಲ್ಲಿ ಬರುವ ಶ್ರೀ ಕೊಂಗಾಡಿಯಪ್ಪ ಪದವಿ ಕಾಲೇಜು, ದೊಡ್ಡಬಳ್ಳಾಪುರ ಇಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರ ಕಛೇರಿ ಪತ್ರ ಸಂಖ್ಯೆ:ಕಾಶಿಇ:207:ಖಾಹುಭ:2018-19 ಬೆಂಗ್ರಾ:ನೇವಿ-2, ದಿನಾಂಕ:21.03.2023.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಲೋಕಸೇವಾ ನಿರತ ಡಿ ಕೊಂಗಾಡಿಯಪ್ಪ ಸ್ಮಾರಕ ಸಂಸ್ಥೆ ದೊಡ್ಡಬಳ್ಳಾಪುರ ಇದರ ವ್ಯಾಪ್ತಿಯಲ್ಲಿ ಬರುವ ಶ್ರೀ ಕೊಂಗಾಡಿಯಪ್ಪ ಪದವಿ ಕಾಲೇಜು, ದೊಡ್ಡಬಳ್ಳಾಪುರ-ಇಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಉಲ್ಲೇಖಿತ ಮಾನ್ಯ ಆಯುಕ್ತರ ಪತ್ರದಲ್ಲಿ ಅನುಮತಿ ನೀಡಿರುತ್ತಾರೆ. ಸದರಿ ಪತ್ರದಲ್ಲಿ ಸೂಚಿಸಿರುವ ಎಲ್ಲಾ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಹುದ್ದೆ ಭರ್ತಿ ಮಾಡಿಕೊಳ್ಳಲು ಕ್ರಮ ವಹಿಸಲು ಸೂಚಿಸಲಾಗಿದೆ.

ಕಾಲೇಜಿನ ಆಡಳಿತ ಮಂಡಳಿ/ಪ್ರಾಂಶುಪಾಲರು ನೀಡಿರುವ ಮಾಹಿತಿ ಅನ್ವಯ ಸದರಿ ಕಾಲೇಜಿನಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಉಲ್ಲೇಖಿತ ಮಾನ್ಯ ಆಯುಕ್ತರ ಕಛೇರಿ ಪತ್ರದಲ್ಲಿ ಅನುಮತಿ ನೀಡಲಾಗಿದ್ದು, ಈ ಬಗ್ಗೆ ತಪ್ಪು ಮಾಹಿತಿ/ವ್ಯತ್ಯಾಸದ ಮಾಹಿತಿ ನೀಡಿ, ಮುಂದೆ ಅಸಂಗತತೆ ಏನಾದರೂ ಉದ್ಭವಿಸಿದಲ್ಲಿ ಇದಕ್ಕೆ ಸಂಬಂಧಪಟ್ಟ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ತಮ್ಮ ವಿಶ್ವಾಸಿ

Shylaja

**ಜಂಟಿ ನಿರ್ದೇಶಕರು**
ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ
ಬೆಂಗಳೂರು - 560 009

**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ:207:ಖಾಹುಭ:2018-19:ಬೆಂಗ್ರಾ:
ನೇವಿ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ,
ಬೆಂಗಳೂರು, ದಿನಾಂಕ:21.03.2023

**ಇವರಿಗೆ:**
ಜಂಟಿ ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ,
ಪ್ರಾದೇಶಿಕ ಕಛೇರಿ,
ಬೆಂಗಳೂರು.

ಮಾನ್ಯರೆ,

**ವಿಷಯ:** ಶ್ರೀ ಲೋಕಸೇವಾ ನಿರತ ಡಿ ಕೊಂಗಾಡಿಯಪ್ಪ ಸ್ಮಾರಕ ಸಂಸ್ಥೆ, ದೊಡ್ಡಬಳ್ಳಾಪುರ ಇವರ ಆಡಳಿತ ವ್ಯಾಪ್ತಿಗೆ ಒಳಪಡುವ ಶ್ರೀ ಕೊಂಗಾಡಿಯಪ್ಪ ಪದವಿ ಕಾಲೇಜು, ದೊಡ್ಡಬಳ್ಳಾಪುರ ಇಲ್ಲಿ ಖಾಲಿಯಿರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

**ಉಲ್ಲೇಖ:**
1) ಸರ್ಕಾರದ ಆದೇಶ ಸಂಖ್ಯೆ:ಇಡಿ/146/ಯುಪಿಸಿ/79 ದಿ:03.10.1981 ಹಾಗೂ ಅದಕ್ಕೆ ಸಂಬಂಧಿಸಿದಂತೆ ಸರ್ಕಾರವು ಕಾಲಕಲಕ್ಕೆ ಹೊರಡಿಸಿರುವ ತಿದ್ದುಪಡಿ ಆದೇಶಗಳು
2) ಸರ್ಕಾರದ ಆದೇಶ ಸಂಖ್ಯೆ:ಇಡಿ/551/ಯುಪಿಸಿ/99 ದಿನಾಂಕ:07.08.2003
3) ಸರ್ಕಾರದ ಪತ್ರ ಸಂಖ್ಯೆ:ಇಡಿ/240/ಯುಪಿಸಿ/2014, ದಿನಾಂಕ:01.09.2017.
4) ಸರ್ಕಾರದ ಪತ್ರ ಸಂಖ್ಯೆ:ಇಡಿ:160:ಯುಪಿಸಿ:2022(ಇ), ದಿನಾಂಕ:05.12.2022
5) ಈ ಕಛೇರಿಯ ಆದೇಶ ಸಂಖ್ಯೆ:ಕಾಶಿಇ/80/ಖಾಹುಮಾ/2014-15/ನೇವಿ-2 ದಿನಾಂಕ: 06.01.2023
6) ಯುಜಿಸಿ ಅಧಿಸೂಚನೆ ಸಂಖ್ಯೆ:ಎಫ್.1-2/2017(ಇಸಿ/ಪಿಎಸ್) ದಿ:18.07.2018
7) ಸರ್ಕಾರದ ಆದೇಶ ಸಂಖ್ಯೆ:ಇಡಿ/483/ಯುಎನ್ಇ/2017, ದಿ:16.03.2019
8) ತಮ್ಮ ಪತ್ರ ಸಂಖ್ಯೆ:ಕಾಶಿಇ:ಪ್ರಾಕಬೆಂ:ಆಂ-1:136:ಖಾಹುಭ:2022-23, ದಿ:14.11.2022 ಮತ್ತು ಪತ್ರ ಸಂಖ್ಯೆ:ಕಾಶಿಇ:ಪ್ರಾಕಬೆಂ:ಆಂ-1:ಖಾಹುಭ:112:2021-22, ದಿನಾಂಕ:21.02.2023
9) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ:01:ಸೆಹಿಮ:2022, ದಿ:28.12.2022 ಮತ್ತು ಸಿಆಸುಇ:02:ಸೆಹಿಮ:2023, ದಿ:08.03.2023

** ** **

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(3)ರ ಸರ್ಕಾರದ ಪತ್ರದಲ್ಲಿ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ನಿವೃತ್ತಿ, ಮರಣ, ರಾಜೀನಾಮೆ ಹಾಗೂ ಇನ್ನಿತರೆ ಕಾರಣಗಳಿಂದ ದಿನಾಂಕ:31.12.2015 ರೊಳಗೆ ಖಾಲಿಯಾಗಿರುವ ಬೋಧಕ ಹುದ್ದೆಗಳನ್ನು ಕಾರ್ಯಭಾರದ ಆಧಾರದ ಮೇಲೆ ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಅದರಂತೆ, ಉಲ್ಲೇಖ(8)ರ ತಮ್ಮ ಪತ್ರಗಳಲ್ಲಿ ಲೋಕಸೇವಾ ನಿರತ ಡಿ ಕೊಂಗಾಡಿಯಪ್ಪ

..2..

ಸ್ಮಾರಕ ಸಂಸ್ಥೆ, ದೊಡ್ಡಬಳ್ಳಾಪುರ ಇವರ ಆಡಳಿತ ವ್ಯಾಪ್ತಿಗೆ ಒಳಪಡುವ ಶ್ರೀ ಕೊಂಗಾಡಿಯಪ್ಪ ಪದವಿ ಕಾಲೇಜು, ದೊಡ್ಡಬಳ್ಳಾಪುರ ಇಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ಕೋರಿರುತ್ತೀರಿ. ಉಲ್ಲೇಖ(4)ರ ಸರ್ಕಾರದ ಪತ್ರದಲ್ಲಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಆರ್ಥಿಕ ಇಲಾಖೆ ನಿಗಧಿಪಡಿಸಿರುವ ಮಾನದಂಡಗಳನ್ವಯ ಪಾರದರ್ಶಕವಾಗಿ ಭರ್ತಿ ಮಾಡಲು ನಿಯಮಾನುಸಾರ ನೇಮಕಾತಿ ಅಧಿಸೂಚನೆ ಹೊರಡಿಸುವ ಬಗ್ಗೆ ಅನುಮತಿ ನೀಡಲು ಇಲಾಖೆಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಅದರಂತೆ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳ ಭರ್ತಿಗೆ ಅನುಮತಿ ನೀಡಲು ಪರಿಶೀಲನೆಗಾಗಿ, ಉಲ್ಲೇಖ(5)ರಲ್ಲಿ ಇಲಾಖಾ ಹಂತದಲ್ಲಿ ತ್ರಿಸದಸ್ಯ ಸಮಿತಿಯನ್ನು ರಚಿಸಲಾಗಿದ್ದು, ಉಲ್ಲೇಖ(8)ರ ತಮ್ಮ ಪತ್ರದೊಂದಿಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಮೀಸಲಾತಿಗನುಗುಣವಾಗಿ ಮತ್ತು ನಿಗದಿತ ಪೂರ್ಣ ಕಾರ್ಯಭಾರ ಲಭ್ಯವಿರುವ ಖಾಲಿ ಇರುವ **ಒಟ್ಟು-07** ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ತ್ರಿಸದಸ್ಯ ಸಮಿತಿಯು ಶಿಫಾರಸ್ಸು ಮಾಡಿರುವುದರಿಂದ ಈ ಕೆಳಕಂಡ ನಿಬಂಧನೆಗಳಿಗೊಳಪಟ್ಟು ಸದರಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

ಸದರಿ ಹುದ್ದೆಗಳನ್ನು ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಹಾಗೂ ಯು.ಜಿ.ಸಿ ನಿಯಮಗಳನ್ವಯ ಉಲ್ಲೇಖ(6 ಮತ್ತು 7) ರಂತೆ ಆಯ್ಕೆ ಸಮಿತಿಯ ಮೂಲಕ ಸಂದರ್ಶನ ನಡೆಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಂಡು ನೇಮಕಾತಿ ಅನುಮೋದನೆಗೆ ಸರ್ಕಾರವು ನಿರ್ದೇಶಿಸಿರುವಂತೆ ಆರ್ಥಿಕ ಇಲಾಖೆಯು ನಿಗಧಿಪಡಿಸಿರುವ ಅನುಬಂಧ-4ರಲ್ಲಿ ಸಂಬಂಧಪಟ್ಟ ದೃಢೀಕೃತ ದಾಖಲಾತಿಗಳೊಂದಿಗೆ ಮತ್ತು ತಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

| ಕ್ರ. ಸಂ | ವಿಷಯ | ಭರ್ತಿ ಮಾಡಲು ಅನುಮತಿ ನೀಡಿರುವ ಹುದ್ದೆಗಳು | ಹುದ್ದೆ ಭರ್ತಿ ಮಾಡಬೇಕಾದ ಮೀಸಲಾತಿ | ಷರಾ ಶ್ರೀ/ಶ್ರೀಮತಿ |
|---|---|---|---|---|
| 1 | ಕನ್ನಡ | 01 | ಪ.ಜಾ-1 | ಶ್ರೀ ನಾರೆಪ್ಪ ಹೆಚ್.ಎಸ್ ಇವರು ದಿ:31.03.2005 ರಂದು ವಯೋನಿವೃತ್ತಿ ಹೊಂದಿದ ಪ್ರಯುಕ್ತ ತೆರವಾದ ಹುದ್ದೆಗೆದುರಾಗಿ |
| 2 | ಆಂಗ್ಲಭಾಷೆ | 01 | ಪ.ಜಾ-1 | ಶ್ರೀ ನಾರಾಯಣನ್ ಎಸ್ ಇವರು ದಿ:30.04.2013 ರಂದು ವಯೋನಿವೃತ್ತಿ ಹೊಂದಿದ ಪ್ರಯುಕ್ತ ತೆರವಾದ ಹುದ್ದೆಗೆದುರಾಗಿ |

..3..

| | | | | |
|---|---|---|---|---|
| 3 | ಭೌತಶಾಸ್ತ್ರ | 01 | ಪ.ಜಾ-1 | ಶ್ರೀ ಅನಂತಪ್ರಕಾಶ್ ಬಿ.ಕೆ ಇವರು ದಿ:31.10.2007 ರಂದು ವಯೋನಿವೃತ್ತಿ ಹೊಂದಿದ ಪ್ರಯುಕ್ತ ತೆರವಾದ ಹುದ್ದೆಗೆದುರಾಗಿ |
| 4 | ರಸಾಯನಶಾಸ್ತ್ರ | 01 | ಪ.ಜಾ-1 | ಶ್ರೀ ವೆಂಕಟರೆಡ್ಡಪ್ಪಚೆಟ್ಟಿ ಎಂ ಇವರು ದಿ:30.06.2004 ರಂದು ವಯೋನಿವೃತ್ತಿ ಹೊಂದಿದ ಪ್ರಯುಕ್ತ ತೆರವಾದ ಹುದ್ದೆಗೆದುರಾಗಿ |
| 5 | ಗಣಿತಶಾಸ್ತ್ರ | 01 | ಪ.ಜಾ-1 | ಶ್ರೀ ಶ್ರೀನಿವಾಸ ಬಿ.ಅರ್ ಇವರು ದಿ:30.09.2006 ರಂದು ವಯೋನಿವೃತ್ತಿ ಹೊಂದಿದ ಪ್ರಯುಕ್ತ ತೆರವಾದ ಹುದ್ದೆಗೆದುರಾಗಿ |
| 6 | ವಾಣಿಜ್ಯಶಾಸ್ತ್ರ | 01 | ಪ.ಜಾ-1 | ಶ್ರೀ ಶ್ರೀಧರ ಎ.ವಿ ಇವರು ದಿ:31.03.2013 ರಂದು ವಯೋನಿವೃತ್ತಿ ಹೊಂದಿದ ಪ್ರಯುಕ್ತ ತೆರವಾದ ಹುದ್ದೆಗೆದುರಾಗಿ |
| 7 | ಗ್ರಂಥಪಾಲಕರು | 01 | ಏಕವ್ಯಕ್ತಿ ವಿಭಾಗ ಮೀಸಲಾತಿ ಅನ್ವಯಿಸುವುದಿಲ್ಲ | ಶ್ರೀಮತಿ ಎಲ್ ಶ್ರೀಮತಿ ಭಾಯಿ ಇವರು ದಿನಾಂಕ:31.07.2005 ರಂದು ವಯೋನಿವೃತ್ತಿ ಹೊಂದಿದ ಪ್ರಯುಕ್ತ ತೆರವಾದ ಹುದ್ದೆಗೆದುರಾಗಿ |
| **ಒಟ್ಟು** | | **07 ಹುದ್ದೆಗಳು** | | |

**ನಿಬಂಧನೆಗಳು:**

1. ಅಭ್ಯರ್ಥಿಗಳು ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಉಲ್ಲೇಖ(6)ರ ಯು.ಜಿ.ಸಿ ಅಧಿಸೂಚನೆಯಲ್ಲಿನ ಮತ್ತು ಎನ್ಇಟಿ-ಎಸ್ಎಲ್ಇಟಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪಿ.ಹೆಚ್.ಡಿ ಪದವಿಯನ್ನು ಪಡೆದಿರುವ ಅಭ್ಯರ್ಥಿಗಳಿಗೆ ಎನ್ಇಟಿ-ಎಸ್ಎಲ್ಇಟಿ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ. ಪಿ.ಹೆಚ್.ಡಿ ಪದವಿಯನ್ನು ಕೋರ್ಸ್ ವರ್ಕ್‌ನೊಂದಿಗೆ ಪಡೆಯಬೇಕಾಗಿರುತ್ತದೆ. ಒಂದು ವೇಳೆ ದಿನಾಂಕ:11.07.2009ರ ಪೂರ್ವದಲ್ಲಿ ಪಿ.ಹೆಚ್.ಡಿ ಪದವಿ ಪಡೆದಿದ್ದಲ್ಲಿ-ಪಿ.ಹೆಚ್.ಡಿ.ಗೆ ನೊಂದಣಿ ಮಾಡಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ದಿನಾಂಕ:04.05.2016ರ ಯು.ಜಿ.ಸಿ ಅಧಿಸೂಚನೆಯಲ್ಲಿ ಹೊರಡಿಸಿರುವ ನಿಯಮಗಳನ್ನು ಪೂರೈಸುವ ಷರತ್ತುಗಳಿಗೊಳಪಟ್ಟಿರುತ್ತದೆ. ದಿನಾಂಕ:11.07.2009ರ ನಂತರದ ಯಾವುದೇ ನೇಮಕಾತಿಗೆ ಎಂ.ಫಿಲ್. ವಿದ್ಯಾರ್ಹತೆ ಪರಿಗಣಿಸತಕ್ಕದ್ದಲ್ಲ.
2. ಪ್ರತಿಯೊಂದು ಹುದ್ದೆಯನ್ನು ಜಾಹಿರಾತುಗೊಳಿಸುವ ಮೊದಲು ಮಂಜೂರಾದ ಹುದ್ದೆಗಳು, ಖಾಲಿಯಾಗಿರುವ ಹುದ್ದೆಗಳು ಹಾಗೂ ಹುದ್ದೆಗೆ ಬೇಕಾಗುವ ಕನಿಷ್ಠ ಕಾರ್ಯಭಾರ ಅಂದರೆ ಪ್ರಯೋಗಾಲಯ ತರಗತಿಗಳನ್ನು ಹೊಂದಿರುವ ವಿಷಯಗಳಲ್ಲಿ 20 ಗಂಟೆ ಮತ್ತು ಪ್ರಯೋಗಾಲಯ ತರಗತಿಗಳನ್ನು ಹೊಂದಿಲ್ಲದ ವಿಷಯಗಳಲ್ಲಿ 16 ಗಂಟೆ ಕಾರ್ಯಭಾರ ಕಡ್ಡಾಯವಾಗಿರಬೇಕು. ಸದರಿ

..4..

ಹುದ್ದೆಗಳಿಗೆ ಪ್ರಸಕ್ತ ವರ್ಷದ ಶೈಕ್ಷಣಿಕ ಸಾಲಿನಲ್ಲಿ ಕಾರ್ಯಭಾರವಿರುವುದನ್ನು ಖಚಿತಪಡಿಸಿಕೊಂಡು, ದೃಢೀಕರಿಸಿಕೊಂಡು ಹುದ್ದೆ ಭರ್ತಿ ಮಾಡುವುದು. ನಿಗದಿತ ಕಾರ್ಯಭಾರ ಇಲ್ಲದಿರುವ ಹುದ್ದೆಗಳನ್ನು ಭರ್ತಿ ಮಾಡತಕ್ಕದ್ದಲ್ಲ

3. ಸದರಿ ಹುದ್ದೆಗಳು ಅನುಮೋದಿತ ಹಾಗೂ ಮಂಜೂರಾದ (ನಿವೃತ್ತಿ, ಮರಣ, ರಾಜೀನಾಮೆ ಮತ್ತು ಸ್ವಯಂ ನಿವೃತ್ತಿಯಿಂದ ತೆರವಾಗಿರುವ) ಹುದ್ದೆಗಳಾಗಿರಬೇಕು
4. ಮೇಲ್ಕಂಡ ಹುದ್ದೆಗಳಲ್ಲಿ ಯಾರಾದರೂ ಅರೆಕಾಲಿಕ ಸ್ಟ್ಯಾಪ್-ಗ್ಯಾಪ್ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಕರಣ ನ್ಯಾಯಾಲಯದಲ್ಲಿ ಬಾಕಿ ಇದ್ದಲ್ಲಿ, ಅಂತಹ ಹುದ್ದೆಗಳನ್ನು ಭರ್ತಿ ಮಾಡುವಾಗ ನ್ಯಾಯಾಲಯದ ಆದೇಶದ ಪ್ರಕಾರ ಮತ್ತು ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬೇಕು
5. ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಉಲ್ಲೇಖ(6)ರ ಯು.ಜಿ.ಸಿ ನಿಯಮ 3.1ರಂತೆ ರಾಷ್ಟ್ರಮಟ್ಟದಲ್ಲಿ ಜಾಹೀರಾತುಗೊಳಿಸುವುದು ಮತ್ತು ಒಂದು ರಾಜ್ಯಮಟ್ಟದ ದಿನಪತ್ರಿಕೆಯಲ್ಲಿ ಪ್ರಕಟಪಡಿಸುವುದು
6. ನೇಮಕಾತಿ ನಿಯಮದಂತೆ ಅಭ್ಯರ್ಥಿಗಳು ಕನಿಷ್ಠ ಮತ್ತು ಗರಿಷ್ಠ ವಯೋಮಿತಿ ಒಳಗೆ ಇರಬೇಕು (ದಿನಾಂಕ:20.06.2018ರ ಸರ್ಕಾರದ ಆದೇಶ ಸಂಖ್ಯೆ: ಇಡಿ/49/ಯುಪಿಸಿ/2018ರ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ & ಪ್ರವರ್ಗ-1 ಗರಿಷ್ಠ 45, ಇತರೆ ಹಿಂದುಳಿದ ವರ್ಗ ಗರಿಷ್ಠ 43 ಹಾಗೂ ಸಾಮಾನ್ಯ ವರ್ಗ ಗರಿಷ್ಠ 40 ವರ್ಷಗಳು) ದಿನಾಂಕ:13.12.2018ರ ಸಂಖ್ಯೆ:ಇಡಿ/87/ಯುಪಿಸಿ/2016ರ ಸರ್ಕಾರದ ಸೇರ್ಪಡೆ ಆದೇಶದನ್ವಯ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಪೂರ್ಣಕಾಲಿಕ ಬೋಧನಾನುಭವ ಹೊಂದಿರುವ ಅಭ್ಯರ್ಥಿಗಳಿಗೆ ಮೇಲಿನಂತೆ ಗರಿಷ್ಠ ವಯೋಮಿತಿಯನ್ನು ನಿಗದಿಪಡಿಸುವುದರೊಂದಿಗೆ ಅವರು ಬೋಧನಾನುಭವ ಹೊಂದಿರುವ ಸೇವಾವಧಿ ಅಥವಾ 5 ವರ್ಷಗಳು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ಅವಧಿಯನ್ನು ಗರಿಷ್ಠ ವಯೋಮಿತಿಯಲ್ಲಿ ವಿನಾಯಿತಿಯನ್ನು ಪರಿಗಣಿಸಬಹುದಾಗಿದೆ
7. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಉಲ್ಲೇಖ(7)ರ ಸರ್ಕಾರದ ಆದೇಶ ಹಾಗೂ ಉಲ್ಲೇಖ(6)ರ ಯುಜಿಸಿ ಅಧಿಸೂಚನೆಯ ಕಂಡಿಕೆ 5.1 ರಂತೆ ಆಯ್ಕೆ ಸಮಿತಿಯನ್ನು ರಚಿಸಿ, ಇದೇ ನಿಯಮದ 6 ಮತ್ತು ಅಪೆಂಡಿಕ್ಸ್-2ರ ಟೇಬಲ್ 1, 2 ಮತ್ತು 3ಬಿರಲ್ಲಿ ತಿಳಿಸಿರುವಂತೆ, ನಿಯಮಾನುಸಾರ ಪಾರದರ್ಶಕವಾಗಿ ಸಂಬಂಧಪಟ್ಟ ದಾಖಲೆಗಳೊಂದಿಗೆ ಆಯ್ಕೆ ಪ್ರಕ್ರಿಯೆ ನಡೆಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು

..5..

8. ಆಯ್ಕೆ ಪ್ರಕ್ರಿಯೆಯ ಯಾವುದೇ ಹಂತದಲ್ಲಾದರೂ, ಸದರಿ ಹುದ್ದೆಯ ಅನುಮತಿ ಮತ್ತು ಆಯ್ಕೆಯನ್ನು ಇಲಾಖಾ/ಸರ್ಕಾರವು ರದ್ದುಪಡಿಸುವ ಅಧಿಕಾರವನ್ನು ಹೊಂದಿದ್ದು, ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸಿದ ಅಥವಾ ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ಸದರಿ ಹುದ್ದೆಗೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ(ಈ ಷರತ್ತನ್ನು ಪತ್ರಿಕಾ ಜಾಹಿರಾತಿನಲ್ಲಿ ಕಡ್ಡಾಯವಾಗಿ ಆಡಳಿತ ಮಂಡಳಿ ನೀಡತಕ್ಕದ್ದು)
9. ಕಾಲೇಜಿನ ಆಡಳಿತ ಮಂಡಳಿ ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರು ನೀಡಿರುವ ಮಾಹಿತಿ ಆಧಾರಿತ ಸದರಿ ಕಾಲೇಜಿನಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದ್ದು, ಈ ಬಗ್ಗೆ ತಪ್ಪು ಮಾಹಿತಿ/ವ್ಯತ್ಯಾಸದ ಮಾಹಿತಿ ನೀಡಿ ಮುಂದೆ ಅಸಂಗತತೆ ಏನಾದರೂ ಉದ್ಭವಿಸಿದಲ್ಲಿ ಇದಕ್ಕೆ ಸಂಬಂಧಪಟ್ಟ ಆಡಳಿತ ಮಂಡಳಿ ಹಾಗೂ ಪ್ರಾದೇಶಿಕ ಜಂಟಿ ನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

ತಮ್ಮ ವಿಶ್ವಾಸಿ,

**ಆಯುಕ್ತರು**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

**ಪ್ರತಿ:**

1) ಅಧ್ಯಕ್ಷರು/ಕಾರ್ಯದರ್ಶಿಗಳು, ಶ್ರೀ ಲೋಕಸೇವಾ ನಿರತ ಡಿ ಕೊಂಗಾಡಿಯಪ್ಪ ಸ್ಮಾರಕ ಸಂಸ್ಥೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ-561203
2) ಪ್ರಾಂಶುಪಾಲರು, ಶ್ರೀ ಕೊಂಗಾಡಿಯಪ್ಪ ಪದವಿ ಕಾಲೇಜು, ದೊಡ್ಡಬಳ್ಳಾಪುರ-561203
3) ಕಛೇರಿ ಪ್ರತಿ